ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-2, September-October 2026, Pp. 1-11
©*IIMRD*, Mysuru
www.iimrd.com

# ಹೊನ್ನಾಳಿ ಪ್ರದೇಶದ ಪುರಾತತ್ವ ನೆಲೆಗಳ ಐತಿಹಾಸಿಕ ಅಧ್ಯಯನ

**ತಿಪ್ಪೇಶ್ ಎಸ್**
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.

**ಸಾರಾಂಶ: (Abstract)**

*ಹೊನ್ನಾಳಿ ಪ್ರದೇಶವು ಕರ್ನಾಟಕದ ಪ್ರಮುಖ ಐತಿಹಾಸಿಕ ಹಾಗೂ ಪುರಾತತ್ವ ಮಹತ್ವವನ್ನು ಹೊಂದಿರುವ ಪ್ರದೇಶಗಳಲ್ಲಿ ಒಂದಾಗಿದೆ. ಈ ಅಧ್ಯಯನವು ಹೊನ್ನಾಳಿ ಸುತ್ತಮುತ್ತಲಿನ ಪುರಾತತ್ವ ನೆಲೆಗಳು, ಅವುಗಳ ಕಾಲಮಾನ, ಸ್ಮಾರಕಗಳು, ಶಾಸನಗಳು, ದೇವಾಲಯಗಳು ಹಾಗೂ ಲಭ್ಯವಿರುವ ಪುರಾತತ್ವ ಅವಶೇಷಗಳನ್ನು ಐತಿಹಾಸಿಕ ದೃಷ್ಟಿಕೋನದಿಂದ ವಿಶ್ಲೇಷಿಸುತ್ತದೆ. ಶಾಸನಗಳು, ವಾಸ್ತುಶಿಲ್ಪ, ಶಿಲ್ಪಕಲೆ, ನಾಣ್ಯಗಳು ಮತ್ತು ಸ್ಥಳೀಯ ಪರಂಪರೆಗಳು ಹೊನ್ನಾಳಿ ಪ್ರದೇಶದ ಚಾರಿತ್ರಿಕ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ಪ್ರಮುಖ ಆಧಾರಗಳಾಗಿವೆ. ವಿವಿಧ ಕಾಲಘಟ್ಟಗಳ ಪುರಾತತ್ವ ಸಾಕ್ಷ್ಯಗಳನ್ನು ಪರಸ್ಪರ ಹೋಲಿಕೆ ಮಾಡುವ ಮೂಲಕ ಹೊನ್ನಾಳಿ ಪ್ರದೇಶದ ಐತಿಹಾಸಿಕ ನಿರಂತರತೆ ಹಾಗೂ ಸಾಂಸ್ಕೃತಿಕ ವೈವಿಧ್ಯವನ್ನು ವಿಶ್ಲೇಷಿಸಲಾಗಿದೆ.*

**ಮುಖ್ಯಪದಗಳು (Keywords):** *ಹೊನ್ನಾಳಿ, ಪುರಾತತ್ವ ನೆಲೆಗಳು, ಐತಿಹಾಸಿಕ ಅಧ್ಯಯನ, ಶಾಸನಗಳು, ಸಾಂಸ್ಕೃತಿಕ ಪರಂಪರೆ*

## ಪೀಠಿಕೆ

ಸಂಶೋಧನಾ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ದಾವಣಗೆರೆ ಜಿಲ್ಲೆಯ ಹೊನ್ನಾಳಿ ಪ್ರದೇಶದಲ್ಲಿ ಮೊದಲ ಬಾರಿಗೆ ಕ್ರಿ.ಶ. 1881ರಲ್ಲಿ ರಾಬರ್ಟ್ ಬ್ರೂಸ್ ಫೂಟ್ ಅವರು ನ್ಯಾಮತಿ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಆದಿ ಹಳೆಶಿಲಾಯುಗಕ್ಕೆ ಸಂಬಂಧಿಸಿದ ಬೆಣಚುಕಲ್ಲಿನಿಂದ ತಯಾರಿಸಿದ ಕೈಕೊಡಲಿಯನ್ನು ಪತ್ತೆಹಚ್ಚಿರುವುದಾಗಿ ತಿಳಿದುಬರುತ್ತದೆ. ಕ್ರಿ.ಶ. 1988ರಲ್ಲಿ ಕೆ.ಪಿ. ಪೂಣಚ್ಚ ಅವರು ನ್ಯಾಮತಿಯ ಹಿರೇಹಳ್ಳದ ಪ್ರದೇಶದಲ್ಲಿ ಚಕ್ಕೆ ತೆಗೆಯುವ ಕೈಕೊಡಲಿ ಹಾಗೂ ಚಕ್ಕೆ ತೆಗೆದ ಮಚ್ಚುಗತ್ತಿಯಂತಹ ಶಿಲಾಯುಧಗಳನ್ನು ಪತ್ತೆಹಚ್ಚಿದ್ದಾರೆ. ಅಲ್ಲದೆ, ಗೋವಿನಕೋವಿ, ಚಿಕ್ಕಬಸೂರು ಮತ್ತು ಹಾಡೋನಹಳ್ಳಿ ಪ್ರದೇಶಗಳಲ್ಲಿಯೂ ಹಳೆಶಿಲಾಯುಗದ ಶಿಲೋಪಕರಣಗಳು ದೊರೆತಿವೆ.

ಹೊನ್ನಾಳಿ ತಾಲೂಕಿನ ಹಾಡೋನಹಳ್ಳಿಯಲ್ಲಿ ರಾಜಾರಾಮ್ ಹೆಗಡೆ ಅವರು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಬೆಣಚುಕಲ್ಲಿನಿಂದ ತಯಾರಿಸಿದ ಕೈಕೊಡಲಿ ಮತ್ತು ಹೆರೆಗತ್ತಿಗಳು ಪತ್ತೆಯಾಗಿವೆ. ಇವುಗಳಲ್ಲಿ

*Please cite this article as:* ತಿಪ್ಪೇಶ್, ಎಸ್. (2026). ಹೊನ್ನಾಳಿ ಪ್ರದೇಶದ ಪುರಾತತ್ವ ನೆಲೆಗಳ ಐತಿಹಾಸಿಕ ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(2). ಪು.ಸಂ.* 1–11

ಕೈಕೊಡಲಿಯು 13 ಸೆಂ.ಮೀ. ಉದ್ದ ಮತ್ತು 9 ಸೆಂ.ಮೀ. ಅಗಲವನ್ನು ಹೊಂದಿದ್ದರೆ, ಹೆರೆಗತ್ತಿಯು 14 ಸೆಂ.ಮೀ. ಉದ್ದ ಮತ್ತು 10 ಸೆಂ.ಮೀ. ಅಗಲವನ್ನು ಹೊಂದಿದೆ. ಪ್ರಸ್ತುತ ಈ ಶಿಲಾಯುಧಗಳನ್ನು ಕುವೆಂಪು ವಿಶ್ವವಿದ್ಯಾಲಯದ ಪ್ರಾಕ್ತನಶಾಸ್ತ್ರ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ.

ಮೇಲಿನ ನೆಲೆಗಳ ಹೊರತಾಗಿ, ದಾವಣಗೆರೆ ಜಿಲ್ಲೆಯ ಹರಪನಹಳ್ಳಿ, ಜಗಳೂರು ಮತ್ತು ಹರಿಹರ ತಾಲೂಕುಗಳಲ್ಲಿಯೂ ಆದಿ ಹಳೆಶಿಲಾಯುಗಕ್ಕೆ ಸೇರಿದ ಶಿಲೋಪಕರಣಗಳು ದೊರೆತಿರುವ ಮಾಹಿತಿಗಳು ಲಭ್ಯವಾಗಿವೆ. ಹೊನ್ನಾಳಿ ತಾಲೂಕಿನ ಬಿದರಕೆರೆ, ಮಿರುಗನಹಳ್ಳಿ ಮತ್ತು ಸಂಗೇನಹಳ್ಳಿ ಪ್ರದೇಶಗಳಲ್ಲಿಯೂ ಆದಿ ಹಳೆಶಿಲಾಯುಗಕ್ಕೆ ಸೇರಿದ ಶಿಲೋಪಕರಣಗಳು ಪತ್ತೆಯಾಗಿವೆ. ಇವುಗಳಲ್ಲಿ ಹೊನ್ನಾಳಿ ತಾಲೂಕಿನ ಮಾದನಬಾವಿ ಪರಿಸರವು ಅತ್ಯಂತ ಮಹತ್ವದ ಪುರಾತತ್ವ ನೆಲೆಯಾಗಿದೆ. ಇಲ್ಲಿ ಆದಿ ಹಳೆಶಿಲಾಯುಗದಿಂದ ಸೂಕ್ಷ್ಮಶಿಲಾಯುಗದವರೆಗಿನ ಶಿಲಾಯುಧಗಳು ಪತ್ತೆಯಾಗಿದ್ದು, ಮಾನವನ ತಾಂತ್ರಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆಯ ಮೂರು ಹಂತಗಳ ಕುರಿತು ಮಹತ್ವದ ಮಾಹಿತಿಯನ್ನು ಒದಗಿಸುತ್ತದೆ.

**ಆದಿ ಹಳೆಶಿಲಾಯುಗದ ನೆಲೆ – ಮಾದನಬಾವಿ**

ಹೊನ್ನಾಳಿಯಿಂದ ಪಶ್ಚಿಮಕ್ಕೆ ಸುಮಾರು 8 ಕಿ.ಮೀ. ದೂರದಲ್ಲಿ ಮಾದನಬಾವಿ ಗ್ರಾಮವಿದೆ. ಗ್ರಾಮದ ಹೊರವಲಯದಲ್ಲಿ ಒಂದು ಕೆರೆಯನ್ನು ನಿರ್ಮಿಸಲಾಗಿದೆ. ಈ ಕೆರೆಯಿಂದ ಸರಿಸುಮಾರು ಅರ್ಧ ಕಿ.ಮೀ. ದೂರದಲ್ಲಿ ಗವಿಸಿದ್ದೇಶ್ವರ ದೇವಾಲಯವಿರುವ ಒಂದು ಗುಡ್ಡವಿದೆ. ಈ ಗುಡ್ಡದ ವ್ಯಾಪ್ತಿಯಲ್ಲಿ ಆದಿ ಹಳೆಶಿಲಾಯುಗಕ್ಕೆ ಸೇರಿದ ಶಿಲಾಯುಧಗಳು ಪತ್ತೆಯಾಗಿವೆ. ಪ್ರಸ್ತುತ ಶಿಲಾಯುಧಗಳು ದೊರೆತಿರುವ ಪ್ರದೇಶವು ತುಂಗಭದ್ರಾ ನದಿಯಿಂದ ಸುಮಾರು 12 ಕಿ.ಮೀ. ದೂರದಲ್ಲಿದೆ.

ಆದಿ ಹಳೆಶಿಲಾಯುಗದ ಮಾನವನು ನದಿ ಪರಿಸರದ ಜೊತೆಗೆ ಸಣ್ಣ ನೀರಿನ ಚಿಲುಮೆಗಳು ಹಾಗೂ ಜಲಮೂಲಗಳು ಲಭ್ಯವಿರುವ ಪ್ರದೇಶಗಳಲ್ಲಿಯೂ ವಾಸಸ್ಥಾನಗಳನ್ನು ರೂಪಿಸಿಕೊಂಡಿದ್ದಾನೆಂದು ಈ ನೆಲೆಯ ಪುರಾತತ್ವ ಸಾಕ್ಷ್ಯಗಳಿಂದ ತಿಳಿಯಬಹುದು. ಶಿಲಾಯುಧಗಳ ತಯಾರಿಕೆಗೆ ಅಗತ್ಯವಾದ ಕಲ್ಲಿನ ಸಂಪನ್ಮೂಲಗಳು ಹಾಗೂ ನೀರಿನ ಲಭ್ಯತೆ ಈ ಪ್ರದೇಶದಲ್ಲಿ ಮಾನವನ ನೆಲೆ ಮತ್ತು ಚಟುವಟಿಕೆಗಳಿಗೆ ಅನುಕೂಲಕರವಾಗಿದ್ದಿರಬಹುದು. ಈ ಹಿನ್ನೆಲೆಯಲ್ಲಿ ಮಾದನಬಾವಿ ನೆಲೆಯು ಹೊನ್ನಾಳಿ ಪ್ರದೇಶದ ಪ್ರಾಗೈತಿಹಾಸಿಕ ಮಾನವನ ವಾಸಸ್ಥಾನ, ತಾಂತ್ರಿಕ ಕೌಶಲ್ಯ ಹಾಗೂ ಪರಿಸರದೊಂದಿಗಿನ ಅವನ ಹೊಂದಾಣಿಕೆಯನ್ನು ಅರ್ಥಮಾಡಿಕೊಳ್ಳಲು ಮಹತ್ವದ ಪುರಾತತ್ವ ಆಧಾರವಾಗಿದೆ.

***ಮಾದನಬಾವಿಯ ಸೀಳುಗತ್ತಿ***

ಈ ಆಯುಧವು 4 ಸೆಂ.ಮೀ. ಅಗಲ, 3 ಸೆಂ.ಮೀ. ಉದ್ದ ಹಾಗೂ 2.5 ಸೆಂ.ಮೀ. ದಪ್ಪವನ್ನು ಹೊಂದಿದೆ. ಇದರ ಎರಡೂ ಮುಖಗಳಲ್ಲಿ ಚಕ್ಕೆಗಳನ್ನು ಎಬ್ಬಿಸಲಾಗಿದ್ದು, ಮೊನಚಾದ ಅಲಗನ್ನು ಹೊಂದಿದೆ. ಹಿಂಭಾಗದಲ್ಲಿ ಸುಮಾರು 2 ಸೆಂ.ಮೀ. ದಪ್ಪವಿದ್ದು, ಹಿಡಿಕೆಯಂತಹ ರಚನೆಯನ್ನು ಹೊಂದಿದೆ. ಉಪಕರಣದ ನಿರ್ಮಾಣ ವಿಧಾನವನ್ನು ಗಮನಿಸಿದಾಗ, ಶಿಲೆಯನ್ನು ಸೂಕ್ತವಾಗಿ ಆಯ್ಕೆ ಮಾಡಿಕೊಂಡು ಅಗತ್ಯ ಆಕಾರಕ್ಕೆ ಅನುಗುಣವಾಗಿ ಚಕ್ಕೆಗಳನ್ನು ತೆಗೆದು ಉಪಯುಕ್ತ ಅಲಗನ್ನು ರೂಪಿಸಿರುವುದು ಕಂಡುಬರುತ್ತದೆ.

**ಸೀಳುಗತ್ತಿ**

ಈ ಆಯುಧವು 4.5 ಸೆಂ.ಮೀ. ಅಗಲ, 4 ಸೆಂ.ಮೀ. ಉದ್ದ ಹಾಗೂ ಹಿಂಭಾಗದಲ್ಲಿ 2 ಸೆಂ.ಮೀ. ದಪ್ಪವನ್ನು ಹೊಂದಿದೆ. ಇದರ ಎರಡೂ ಮುಖಗಳಲ್ಲಿ ಚಕ್ಕೆಗಳನ್ನು ಎಬ್ಬಿಸಲಾಗಿದ್ದು, ಮುಂಭಾಗದಲ್ಲಿ ಮೊನಚಾದ ಅಲಗನ್ನು ರೂಪಿಸಲಾಗಿದೆ. ಹಿಂಭಾಗದಲ್ಲಿ ಹಿಡಿಕೆಯಂತಹ ರಚನೆಯನ್ನು ಮಾಡಲಾಗಿದೆ. ಇದರ ಆಕಾರ ಮತ್ತು ತಯಾರಿಕಾ ವಿಧಾನವು ಶಿಲೆಯನ್ನು ನಿರ್ದಿಷ್ಟ ಕಾರ್ಯಕ್ಕೆ ಅನುಗುಣವಾಗಿ ಸಂಸ್ಕರಿಸಿರುವುದನ್ನು ಸೂಚಿಸುತ್ತದೆ.

**ಕೈಕೊಡಲಿ**

ಈ ಕೈಕೊಡಲಿಯು 7 ಸೆಂ.ಮೀ. ಅಗಲ, 10 ಸೆಂ.ಮೀ. ಉದ್ದ ಹಾಗೂ 2 ಸೆಂ.ಮೀ. ದಪ್ಪವನ್ನು ಹೊಂದಿದೆ. ಕೈಕೊಡಲಿಯ ಎರಡೂ ಮುಖಗಳಲ್ಲಿ ಚಕ್ಕೆಗಳನ್ನು ಎಬ್ಬಿಸಲಾಗಿದ್ದು, ಅಲಗುಗಳು ತೀಕ್ಷ್ಣವಾಗಿವೆ. ಉಪಕರಣದ ಆಕಾರ, ತಯಾರಿಕಾ ತಂತ್ರ ಹಾಗೂ ಚಕ್ಕೆ ತೆಗೆಯುವ ವಿಧಾನಗಳನ್ನು ಆಧರಿಸಿ, ಇದು ಆದಿ ಹಳೆಶಿಲಾಯುಗಕ್ಕೆ ಸಂಬಂಧಿಸಿದ ಶಿಲಾಯುಧವೆಂದು ಗುರುತಿಸಬಹುದು. ಇದೇ ಪ್ರದೇಶದಲ್ಲಿ ಸೂಕ್ಷ್ಮಶಿಲಾಯುಗಕ್ಕೆ ಸಂಬಂಧಿಸಿದ ಹೆರೆಗತ್ತಿ, ಕೊರೆಗ, ಸೀಳುಕೊಡಲಿ ಹಾಗೂ ಸೀಳುಗತ್ತಿಯಂತಹ ಉಪಕರಣಗಳೂ ದೊರೆತಿವೆ. ಇವು ಈ ಪ್ರದೇಶದಲ್ಲಿ ಶಿಲಾಯುಧ ತಯಾರಿಕಾ ತಂತ್ರಜ್ಞಾನದ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ಮಹತ್ವದ ಪುರಾತತ್ವ ಸಾಕ್ಷ್ಯಗಳಾಗಿವೆ.

**ಅಂತ್ಯ ಹಳೆಶಿಲಾಯುಗದ ನೆಲೆ – ತಕ್ಕನಹಳ್ಳಿ**

ಅಧ್ಯಯನ ಕ್ಷೇತ್ರವಾದ ದಾವಣಗೆರೆ ಜಿಲ್ಲೆಯ ಹೊನ್ನಾಳಿ ಪ್ರದೇಶದ ತುಂಗಭದ್ರಾ ನದಿ ದಡದಲ್ಲಿರುವ ತಕ್ಕನಹಳ್ಳಿ ಈ ಭಾಗದಲ್ಲಿ ಅಂತ್ಯ ಹಳೆಶಿಲಾಯುಗಕ್ಕೆ ಸಂಬಂಧಿಸಿದ ಶಿಲೋಪಕರಣಗಳ ಸಮುಚ್ಚಯ ದೊರೆತಿರುವ ಪ್ರಮುಖ ನೆಲೆಯಾಗಿದೆ. ಕ್ರಿ.ಶ. 1990ರಲ್ಲಿ ಕೆ.ಪಿ. ಪೂಣಚ್ಚ ಅವರು ನೀಡಿದ ವರದಿಯಲ್ಲಿ ತಕ್ಕನಹಳ್ಳಿ ಪ್ರದೇಶದಲ್ಲಿ ಅಂತ್ಯ ಹಳೆಶಿಲಾಯುಗಕ್ಕೆ ಸೇರಿದ ಶಿಲೋಪಕರಣಗಳನ್ನು ಸಂಗ್ರಹಿಸಿರುವ ಕುರಿತು ಉಲ್ಲೇಖಿಸಲಾಗಿದೆ.

ತಕ್ಕನಹಳ್ಳಿ ಗ್ರಾಮದಿಂದ ಪಶ್ಚಿಮಕ್ಕೆ ಸುಮಾರು 200 ಮೀ. ದೂರದಲ್ಲಿ ಹಾಗೂ ಅದೇ ಗ್ರಾಮದ ತುಂಗಭದ್ರಾ ನದಿಯ ದಡದಿಂದ ಸುಮಾರು 80 ಮೀ. ದೂರದಲ್ಲಿ ಈ ಅಂತ್ಯ ಹಳೆಶಿಲಾಯುಗದ ನೆಲೆ ಕಂಡುಬರುತ್ತದೆ. ಈ ನೆಲೆಯು ಪೂರ್ವ–ಪಶ್ಚಿಮವಾಗಿ ಸುಮಾರು 100 ಮೀ. ಹಾಗೂ ಉತ್ತರ–ದಕ್ಷಿಣವಾಗಿ ಸುಮಾರು 50 ಮೀ. ವಿಸ್ತೀರ್ಣವನ್ನು ಹೊಂದಿದೆ. ಇಲ್ಲಿ ಶಿಲಾಯುಧಗಳನ್ನು ತಯಾರಿಸುವ ಚಟುವಟಿಕೆಗಳು ನಡೆದಿರಬಹುದೆಂದು ಊಹಿಸಬಹುದು. ಈ ನೆಲೆಯಲ್ಲಿ ದೊರೆತ ಶಿಲೋಪಕರಣಗಳು ಕರ್ನೂಲು ಪ್ರದೇಶದಲ್ಲಿ ದೊರೆತ ಉಪಕರಣಗಳ ಮಾದರಿಯನ್ನು ಹೋಲುತ್ತವೆ ಎಂದು ಕೆ.ಪಿ. ಪೂಣಚ್ಚ ಅವರು ವಿಶ್ಲೇಷಿಸಿದ್ದಾರೆ.

ಈ ಪ್ರದೇಶದಲ್ಲಿ ಅನುಪಯುಕ್ತ ಬ್ಲೇಡ್‌ಗಳು, ಚಕ್ಕೆಗಳು ಹಾಗೂ ವಿವಿಧ ರೀತಿಯ ಶಿಲಾಯುಧಗಳು ಹೇರಳವಾಗಿ ದೊರೆತಿವೆ. ಇಲ್ಲಿನ ಸ್ತರ ಮತ್ತು ಪುರಾತತ್ವ ಅವಶೇಷಗಳ ಆಧಾರದ ಮೇಲೆ ಮಧ್ಯ

ಹಳೆಶಿಲಾಯುಗ ಮತ್ತು ಅಂತ್ಯ ಹಳೆಶಿಲಾಯುಗದ ಹಂತಗಳನ್ನು ಗುರುತಿಸಲು ಸಾಧ್ಯವಾಗಿದೆ. ತಕ್ಕನಹಳ್ಳಿ ನೆಲೆಯು ಹೊನ್ನಾಳಿ ಪ್ರದೇಶದ ಪ್ರಾಗೈತಿಹಾಸಿಕ ಅಧ್ಯಯನದಲ್ಲಿ ಮಹತ್ವದ ಸ್ಥಾನವನ್ನು ಹೊಂದಿದೆ.

### ಸೂಕ್ಷ್ಮಶಿಲಾಯುಗದ ನೆಲೆ – ಕುಳ್ಳಹಳ್ಳಿ

ಕುಳ್ಳಹಳ್ಳಿ ಗ್ರಾಮದಲ್ಲಿ ಸೂಕ್ಷ್ಮಶಿಲಾಯುಗಕ್ಕೆ ಸೇರಿದ ಶಿಲಾಯುಧಗಳ ಜೊತೆಗೆ ನವಶಿಲಾಯುಗದ ಅವಶೇಷಗಳೂ ಪತ್ತೆಯಾಗಿರುವುದು ತಿಳಿದುಬಂದಿದೆ. ಕುಳ್ಳಹಳ್ಳಿ ಗ್ರಾಮವು ಹೊನ್ನಾಳಿಯಿಂದ ಶಿಕಾರಿಪುರಕ್ಕೆ ಹೋಗುವ ರಸ್ತೆಯ ಮಾರ್ಗದಲ್ಲಿ ಸುಮಾರು 14 ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಬೆಳಗುತ್ತಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಸೇರಿದೆ. ಪ್ರಸ್ತುತ ಈ ಪ್ರದೇಶದಲ್ಲಿ ಜನವಸತಿ ಬಹಳ ಕಡಿಮೆಯಾಗಿದ್ದು, ಕೆಲವು ಭಾಗಗಳು ನಿರ್ಜನವಾಗಿವೆ.

ಗ್ರಾಮದ ಕೆರೆಯ ಹಿಂಭಾಗದಿಂದ ಸುಮಾರು 1 ಕಿ.ಮೀ. ದೂರದಲ್ಲಿ ಹಾಲೇಶಪ್ಪನವರ ಜಮೀನು ಇದ್ದು, ಈ ಪ್ರದೇಶದಲ್ಲಿ ಸೂಕ್ಷ್ಮಶಿಲಾಯುಗಕ್ಕೆ ಸೇರಿದ ಅನೇಕ ಶಿಲೋಪಕರಣಗಳು ಪತ್ತೆಯಾಗಿವೆ. ಅವುಗಳಲ್ಲಿ ಮುಖ್ಯವಾಗಿ ಕೊರೆಗಗಳು, ಹೆರೆಗತ್ತಿಗಳು, ಸೀಳುಗಳು ಹಾಗೂ ಮೂಳೆ ಅವಶೇಷಗಳು ದೊರೆತಿವೆ. ಈ ಪುರಾತತ್ವ ಸಾಕ್ಷ್ಯಗಳು ಈ ಪ್ರದೇಶದಲ್ಲಿ ಪ್ರಾಗೈತಿಹಾಸಿಕ ಮಾನವನ ಚಟುವಟಿಕೆಗಳು ನಡೆದಿದ್ದುದನ್ನು ಸೂಚಿಸುತ್ತವೆ.

### ಕೊರೆಗ

ಈ ಕೊರೆಗವು ಸುಮಾರು 2.5 ಸೆಂ.ಮೀ. ಉದ್ದ ಮತ್ತು ಅಗಲ ಹಾಗೂ 3 ಸೆಂ.ಮೀ. ದಪ್ಪವನ್ನು ಹೊಂದಿದೆ. ಇದನ್ನು ತಯಾರಿಸಲು ಬೆಣಚುಕಲ್ಲನ್ನು ಆಯ್ಕೆ ಮಾಡಿಕೊಂಡಿರುವುದು ಗಮನಾರ್ಹವಾಗಿದೆ. ಶಿಲೆಯ ಗಾತ್ರ, ಆಕಾರ ಮತ್ತು ಅದರ ಬಳಕೆಗೆ ಅನುಗುಣವಾಗಿ ಚಕ್ಕೆಗಳನ್ನು ತೆಗೆದು ಉಪಕರಣವನ್ನು ರೂಪಿಸಿರುವುದು ಕಂಡುಬರುತ್ತದೆ. ಇದರಿಂದ ಆ ಕಾಲದ ಮಾನವರಿಗೆ ಶಿಲೆಯ ಆಯ್ಕೆ, ಗಾತ್ರದ ಅಂದಾಜು ಹಾಗೂ ಉಪಕರಣ ತಯಾರಿಕೆಯ ತಾಂತ್ರಿಕ ಜ್ಞಾನವಿತ್ತು ಎಂದು ಊಹಿಸಬಹುದು.

### ಮಚ್ಚುಗತ್ತಿ

ಈ ಆಯುಧವನ್ನು ತಯಾರಿಸಲು ಬೆಣಚುಕಲ್ಲನ್ನು ಬಳಸಲಾಗಿದೆ. ಮಚ್ಚುಗತ್ತಿಯ ಮೇಲ್ಮುಖದ ಎಡ ಮತ್ತು ಬಲ ಪಾರ್ಶ್ವಗಳಲ್ಲಿ ಚಕ್ಕೆಗಳನ್ನು ತೆಗೆದು, ಕತ್ತಿಯ ಅಲಗಿನಂತೆ ತೀಕ್ಷ್ಣವಾದ ಅಂಚನ್ನು ರೂಪಿಸಲಾಗಿದೆ. ಮಚ್ಚುಗತ್ತಿಯು ಸುಮಾರು 2.5 ಸೆಂ.ಮೀ. ಅಗಲ ಮತ್ತು 3 ಸೆಂ.ಮೀ. ದಪ್ಪವನ್ನು ಹೊಂದಿದೆ. ಇದರ ಎರಡೂ ಮುಖಗಳಲ್ಲಿಯೂ ಚಕ್ಕೆಗಳನ್ನು ತೆಗೆದಿರುವುದು ಕಂಡುಬರುತ್ತದೆ. ಶಿಲೆಯ ಆಯ್ಕೆ ಮತ್ತು ಚಕ್ಕೆ ತೆಗೆಯುವ ತಂತ್ರವು ಉಪಕರಣ ತಯಾರಿಕೆಯಲ್ಲಿ ನಿರ್ದಿಷ್ಟ ಉದ್ದೇಶ ಮತ್ತು ತಾಂತ್ರಿಕ ಕೌಶಲ್ಯವನ್ನು ಹೊಂದಿದ್ದುದನ್ನು ಸೂಚಿಸುತ್ತದೆ.

### ಸೀಳುಗತ್ತಿ

ಈ ಆಯುಧವನ್ನು ತಯಾರಿಸಲು ಬೆಣಚುಕಲ್ಲನ್ನು ಬಳಸಲಾಗಿದೆ. ಸೀಳುಗತ್ತಿಯು ಸುಮಾರು 2 ಸೆಂ.ಮೀ. ಉದ್ದ ಮತ್ತು 2.5 ಸೆಂ.ಮೀ. ಅಗಲವನ್ನು ಹೊಂದಿದೆ. ಇದರ ಹಿಂಭಾಗದಲ್ಲಿ ಹಿಡಿಕೆಯಂತಹ

ರಚನೆಯಿದ್ದು, ಅದು ಸುಮಾರು 1.5 ಸೆಂ.ಮೀ. ದಪ್ಪವನ್ನು ಹೊಂದಿದೆ ಎಂದು ದಾಖಲಾಗಿದೆ. ಹಿಡಿಕೆಯ ಭಾಗದಿಂದ ಮುಂಭಾಗದವರೆಗೆ ಇಳಿಜಾರು ಆಕಾರವನ್ನು ಹೊಂದಿದ್ದು, ಮೇಲ್ಮುಖದಲ್ಲಿ ಮಾತ್ರ ಚಕ್ಕೆಗಳನ್ನು ತೆಗೆದು ಅಲಗನ್ನು ರೂಪಿಸಲಾಗಿದೆ. ಇದರ ತಯಾರಿಕಾ ವಿಧಾನವು ಸೂಕ್ಷ್ಮಶಿಲಾಯುಗದ ಮಾನವನ ಶಿಲೋಪಕರಣ ತಯಾರಿಕಾ ಕೌಶಲ್ಯವನ್ನು ಪ್ರತಿಬಿಂಬಿಸುತ್ತದೆ.

**ಹೊನ್ನಾಳಿ ಪ್ರದೇಶದ ನವಶಿಲಾಯುಗದ ನೆಲೆಗಳು**

ಹೊನ್ನಾಳಿ ತಾಲೂಕಿನಲ್ಲಿ ಅನೇಕ ನವಶಿಲಾಯುಗದ ನೆಲೆಗಳು ಪತ್ತೆಯಾಗಿರುವುದು ವರದಿಯಾಗಿದೆ. ಕೆ.ಪಿ. ಪೂಣಚ್ಚ ಅವರು ಕ್ರಿ.ಶ. 1990ರ ಅವಧಿಯಲ್ಲಿ ಈ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಆಯನೂರು, ದಿಡಗೂರು, ನ್ಯಾಮತಿ, ಬೆನಕನಹಳ್ಳಿ, ಸಾಸಿವೆಹಳ್ಳಿ, ಹರಗನಹಳ್ಳಿ, ಹಳೆಲಿಂಗಾಪುರ, ಹಾಡೋನಹಳ್ಳಿ ಮತ್ತು ಹೊಸಹಳ್ಳಿ ಪ್ರದೇಶಗಳಲ್ಲಿ ನವಶಿಲಾಯುಗದ ಅವಶೇಷಗಳನ್ನು ಪತ್ತೆಹಚ್ಚಿದ್ದಾರೆ. ಹೊನ್ನಾಳಿ ಮತ್ತು ಸಾಲಬಾಳು ಪ್ರದೇಶಗಳಲ್ಲಿ ನಯವಾದ ಹೊಳಪು ಹೊಂದಿರುವ ಕೈಕೊಡಲಿಗಳನ್ನು ಪತ್ತೆಹಚ್ಚಿರುವುದಾಗಿ ಅವರು ದಾಖಲಿಸಿದ್ದಾರೆ. ಇದಲ್ಲದೆ, ಉಳಿದ ನೆಲೆಗಳಲ್ಲಿ ಕಪ್ಪು, ಕಂದು, ಕೆಂಪು, ನಸುಗೆಂಪು, ನಸುಕಂದು ಹಾಗೂ ಕಪ್ಪು–ಕೆಂಪು ಬಣ್ಣದ ಮಡಕೆ ಚೂರುಗಳು ದೊರೆತಿರುವುದನ್ನು ವರದಿ ಮಾಡಿದ್ದಾರೆ.

ಇವುಗಳಲ್ಲದೆ, ಹಳೆಲಿಂಗಾಪುರ, ಹಾಡೋನಹಳ್ಳಿ, ಹೊಸಹಳ್ಳಿ, ಹರಗನಹಳ್ಳಿ ಮತ್ತು ದಿಡಗೂರು ಪ್ರದೇಶಗಳಲ್ಲಿ ಬಿಳಿ ವರ್ಣದ ಚಿತ್ರಿತ ಶಿಲೋಪಕರಣಗಳು ಹಾಗೂ ಮಡಕೆ ಚೂರುಗಳು ದೊರೆತಿರುವುದಾಗಿ ತಿಳಿದುಬಂದಿದೆ. ಈ ನೆಲೆಗಳಲ್ಲಿ ದೊರೆತ ಪುರಾತತ್ವ ಅವಶೇಷಗಳ ಆಧಾರದ ಮೇಲೆ ನವಶಿಲಾಯುಗದ ಸಂಸ್ಕೃತಿಯ ಸ್ವರೂಪ ಮತ್ತು ಅದರ ವಿಸ್ತರಣೆಯನ್ನು ತಿಳಿಯಲು ಹೆಚ್ಚಿನ ಅಧ್ಯಯನದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಬೆನಕನಹಳ್ಳಿಯಲ್ಲಿ ಪುರಾತತ್ವ ಉತ್ಖನನ ಕಾರ್ಯವನ್ನು ಕೈಗೊಂಡಿರುವುದು ಗಮನಾರ್ಹವಾಗಿದೆ.

**ಬೆನಕನಹಳ್ಳಿ**

ಹೊನ್ನಾಳಿ ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಸುಮಾರು 10 ಕಿ.ಮೀ. ದೂರದಲ್ಲಿ ಬೆನಕನಹಳ್ಳಿ ಗ್ರಾಮವಿದೆ. ಇಲ್ಲಿ ವಸತಿ ದಿಬ್ಬವೊಂದು ಕಂಡುಬರುತ್ತದೆ. ಇದರ ಉತ್ತರ ಭಾಗದಲ್ಲಿ ಸುಮಾರು 10 ̥ 30 ಮೀ. ವಿಸ್ತೀರ್ಣದ ದೊಡ್ಡ ಪರೀಕ್ಷಾ ಗುಂಡಿಯನ್ನು ತೆಗೆಯಲಾಗಿತ್ತು. ಇದು ಸುಮಾರು 1.60 ಮೀ. ಆಳವನ್ನು ಹೊಂದಿತ್ತು. ನೆಲೆಯ ಸ್ತರಗಳನ್ನು ಗುರುತಿಸುವ ಉದ್ದೇಶದಿಂದ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಪರೀಕ್ಷಾ ಗುಂಡಿಗಳನ್ನು ತೆಗೆಯಲಾಗಿತ್ತು.

ಅವುಗಳಲ್ಲಿ ಒಂದು ಗುಂಡಿಗೆ 'ಬಿ.ಎನ್.ಕೆ.ಹೆಚ್.ಎ' ಎಂಬ ಸಂಕೇತವನ್ನು ನೀಡಲಾಗಿತ್ತು. ಈ ಗುಂಡಿಯು ಉತ್ತರ–ದಕ್ಷಿಣ ದಿಕ್ಕಿನಲ್ಲಿ 2 ಮೀ. ಹಾಗೂ ಪೂರ್ವ–ಪಶ್ಚಿಮ ದಿಕ್ಕಿನಲ್ಲಿ 1.25 ಮೀ. ಅಳತೆಯನ್ನು ಹೊಂದಿತ್ತು. ಮತ್ತೊಂದು ಗುಂಡಿಗೆ 'ಬಿ.ಎನ್.ಕೆ.ಹೆಚ್–1ಎ' ಎಂಬ ಸಂಕೇತವನ್ನು

ನೀಡಲಾಗಿದ್ದು, ಈ ಗುಂಡಿಯು ಪೂರ್ವ–ಪಶ್ಚಿಮವಾಗಿ 4 ಮೀ. ಹಾಗೂ ಉತ್ತರ–ದಕ್ಷಿಣವಾಗಿ 2.5 ಮೀ. ಅಳತೆಯನ್ನು ಹೊಂದಿತ್ತು. ಇವೆರಡರ ಮಧ್ಯದಲ್ಲಿ ಸುಮಾರು 0.5 ಮೀ. ಅಗಲದ ಬದುವನ್ನು ಬಿಡಲಾಗಿತ್ತು.

ಈ ಪರೀಕ್ಷಾ ಗುಂಡಿಗಳಲ್ಲಿ ಒಟ್ಟು ಐದು ಸ್ತರಗಳನ್ನು ಗುರುತಿಸಲಾಯಿತು. ಬಿ.ಎನ್.ಕೆ.ಹೆಚ್.ಎ ಗುಂಡಿಯ ಮೊದಲ ಮತ್ತು ಎರಡನೇ ಸ್ತರಗಳು ಕದಡಿದ ಸ್ಥಿತಿಯಲ್ಲಿದ್ದವು. ಈ ಸ್ತರಗಳಲ್ಲಿ ವಿವಿಧ ಸಾಂಸ್ಕೃತಿಕ ಹಂತಗಳಿಗೆ ಸೇರಿದ ಶಿಲೋಪಕರಣಗಳು ಹಾಗೂ ಇತರ ಪುರಾತತ್ವ ಅವಶೇಷಗಳು ಪತ್ತೆಯಾಗಿರುವುದು ವರದಿಯಾಗಿದೆ. ಇದರಿಂದ ಬೆನಕನಹಳ್ಳಿ ನೆಲೆಯು ಸಾಂಸ್ಕೃತಿಕ ಅನುಕ್ರಮವನ್ನು ಗುರುತಿಸಲು ಮಹತ್ವದ ಪುರಾತತ್ವ ನೆಲೆಯಾಗಿದೆ.

**ಕೊಡಚಗೊಂಡನಹಳ್ಳಿ**

ಹೊನ್ನಾಳಿಯಿಂದ ನೈಋತ್ಯ ದಿಕ್ಕಿನಲ್ಲಿರುವ ಕೊಡಚಗೊಂಡನಹಳ್ಳಿ ಗ್ರಾಮಕ್ಕೆ ಸಾಗಲು ಎರಡು ಪ್ರಮುಖ ಮಾರ್ಗಗಳಿವೆ. ಅರಬಗಟ್ಟೆ–ಬಸವನಹಳ್ಳಿ ಮಾರ್ಗವಾಗಿ ಸುಮಾರು 13 ಕಿ.ಮೀ. ಹಾಗೂ ನ್ಯಾಮತಿ ಮಾರ್ಗವಾಗಿ ಸುಮಾರು 17 ಕಿ.ಮೀ. ದೂರದಲ್ಲಿ ಈ ಗ್ರಾಮವನ್ನು ತಲುಪಬಹುದು. ಈ ಗ್ರಾಮವು ಗಂಗನಕೋಟೆ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಸೇರಿದೆ. ಗ್ರಾಮವು ಸುಮಾರು 400 ಎಕರೆ ವಿಸ್ತೀರ್ಣವನ್ನು ಹೊಂದಿದೆ. ಇಲ್ಲಿನ ಭೂಪ್ರದೇಶವು ಎರೆಮಣ್ಣು, ಕೆಂಪುಮಣ್ಣು ಹಾಗೂ ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ.

ಈ ಗ್ರಾಮದಲ್ಲಿ ನವಶಿಲಾಯುಗಕ್ಕೆ ಸೇರಿದ ಎರಡು ಕೈಕೊಡಲಿಗಳು ಪತ್ತೆಯಾಗಿವೆ. ಅಧ್ಯಯನದ ಉದ್ದೇಶದಿಂದ ಈ ಕೈಕೊಡಲಿಗಳಿಗೆ ಕ್ರಮವಾಗಿ **'ಹೆಚ್.ಕೆ.ಹೆಚ್–1'** ಮತ್ತು **'ಹೆಚ್.ಕೆ.ಹೆಚ್–2'** ಎಂಬ ಸಂಕೇತಗಳನ್ನು ನೀಡಲಾಗಿದೆ. ಇವುಗಳನ್ನು ಕೊಡಚಗೊಂಡನಹಳ್ಳಿಯ ಕೈಕೊಡಲಿಗಳು ಎಂದು ಗುರುತಿಸಬಹುದು.

**ಕೈಕೊಡಲಿ–1**

ಈ ಕೈಕೊಡಲಿಯು 10 ಸೆಂ.ಮೀ. ಉದ್ದ, 3 ಸೆಂ.ಮೀ. ಅಗಲ ಹಾಗೂ 2 ಸೆಂ.ಮೀ. ದಪ್ಪವನ್ನು ಹೊಂದಿದೆ. ಕೆಳಭಾಗದಿಂದ ಮೇಲ್ಭಾಗದತ್ತ ಸಾಗಿದಂತೆ ಇದು ಕ್ರಮೇಣ ಕಿರಿದಾಗುವ ಆಕಾರವನ್ನು ಹೊಂದಿದೆ. ಈ ಆಯುಧವು ಗ್ರಾಮದ ಎಡಭಾಗದಲ್ಲಿರುವ ಈಶ್ವರಯ್ಯನವರ ಹೊಲದಲ್ಲಿ ಪತ್ತೆಯಾಗಿದೆ.

**ಕೈಕೊಡಲಿ–2**

ಈ ಕೈಕೊಡಲಿಯು ಮೊದಲನೇ ಕೈಕೊಡಲಿಗೆ ಸಮಾನವಾದ ಅಳತೆಯನ್ನು ಹೊಂದಿದೆ. ಆದರೆ ಇದರ ಒಂದು ಭಾಗವು ಮುರಿದುಹೋಗಿರುವುದರಿಂದ ಪೂರ್ಣ ಪ್ರಮಾಣದಲ್ಲಿ ದೊರೆತಿಲ್ಲ. ಈ ಕೈಕೊಡಲಿಯು ಕೊಡಚಗೊಂಡನಹಳ್ಳಿಯಲ್ಲಿ ಕಂಡುಬರುವ ಉಡೇವಿನ ಕಲ್ಲಿನ ಕಟ್ಟಡದ ಸಮೀಪದಲ್ಲಿ ದೊರೆತಿದೆ. ಮೇಲಿನ ಎರಡೂ ಕೈಕೊಡಲಿಗಳನ್ನು ತಯಾರಿಸಲು ಡಾಲರೈಟ್ ಶಿಲೆಯನ್ನು ಬಳಸಲಾಗಿದೆ.

ಇದೇ ಪ್ರದೇಶದಲ್ಲಿ ಗ್ರಾಮದ ಎಡಭಾಗದಲ್ಲಿರುವ ಜಮೀನುಗಳಲ್ಲಿ ಕೆಂಪು, ಕಂದು ಮತ್ತು ಬೂದು ಬಣ್ಣದ ಮಡಕೆ ಚೂರುಗಳೂ ದೊರೆತಿವೆ. ಕೈಕೊಡಲಿಗಳು ಹಾಗೂ ಮಡಕೆ ಚೂರುಗಳ ಲಭ್ಯತೆಯು ಈ ಪ್ರದೇಶದಲ್ಲಿ ನವಶಿಲಾಯುಗದ ಮಾನವ ಚಟುವಟಿಕೆಗಳು ನಡೆದಿದ್ದುದಕ್ಕೆ ಪುರಾತತ್ವ ಸಾಕ್ಷ್ಯವನ್ನು ಒದಗಿಸುತ್ತದೆ.

**ಚಿಕ್ಕರಹಳ್ಳಿ**

ಹೊನ್ನಾಳಿಯಿಂದ ಪೂರ್ವಕ್ಕೆ ಸುಮಾರು 7 ಕಿ.ಮೀ. ದೂರದಲ್ಲಿ ಚಿಕ್ಕರಹಳ್ಳಿ ಗ್ರಾಮವಿದೆ. ಈ ಗ್ರಾಮವು ಹತ್ತೂರು ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಸೇರಿದೆ. ಗ್ರಾಮದ ರಾಮೇಶ್ವರ ದೇವಾಲಯದ ಬಲಭಾಗದಲ್ಲಿರುವ ಜಮೀನಿನಲ್ಲಿ ನವಶಿಲಾಯುಗಕ್ಕೆ ಸೇರಿದ ಒಂದು ಕೈಕೊಡಲಿ, ಕೆಂಪು ವರ್ಣದ ಮಡಕೆ ಚೂರುಗಳು ಹಾಗೂ ಬೃಹತ್ ಗಾತ್ರದ ಕಬ್ಬಿಣದ ಕಿಟ್ಟವು ಪತ್ತೆಯಾಗಿವೆ.

ಕೈಕೊಡಲಿಯು ಸುಮಾರು 5 ಸೆಂ.ಮೀ. ಉದ್ದ ಹಾಗೂ 2 ಸೆಂ.ಮೀ. ದಪ್ಪವನ್ನು ಹೊಂದಿದೆ. ಇದರ ಮುಂಭಾಗವನ್ನು ಉಜ್ಜಿ ನಯಗೊಳಿಸಲಾಗಿದೆ. ಉಪಕರಣದ ಮೇಲ್ಮೈಯನ್ನು ನಯಗೊಳಿಸಿರುವ ತಂತ್ರವು ನವಶಿಲಾಯುಗದ ಶಿಲೋಪಕರಣಗಳ ಪ್ರಮುಖ ಲಕ್ಷಣವನ್ನು ಸೂಚಿಸುತ್ತದೆ.

**ಮಡಿಕೆ ಬೇಲೂರು**

ಹೊನ್ನಾಳಿಯಿಂದ ಶಿವಮೊಗ್ಗಕ್ಕೆ ಸಾಗುವ ಮಾರ್ಗದಲ್ಲಿ ಉತ್ತರಕ್ಕೆ ಸುಮಾರು 15 ಕಿ.ಮೀ. ದೂರದಲ್ಲಿ ಮಡಕೆಚೀಲೂರು ಗ್ರಾಮವಿದೆ. ಗ್ರಾಮದ ಒಳಭಾಗದಿಂದ ಸುಮಾರು 1 ಕಿ.ಮೀ. ಎಡಕ್ಕೆ ಸಾಗಿದರೆ ತುಂಗಭದ್ರಾ ನದಿಯ ದಂಡೆಯನ್ನು ತಲುಪಬಹುದು. ನದಿ ದಂಡೆಯಿಂದ ಸ್ವಲ್ಪ ಮೇಲ್ಭಾಗದಲ್ಲಿ ರಾಮೇಶ್ವರ ದೇವಾಲಯವಿದೆ. ದೇವಾಲಯದ ಮುಂಭಾಗದಲ್ಲಿರುವ ಜಮೀನಿನಲ್ಲಿ ನವಶಿಲಾಯುಗದಿಂದ ಐತಿಹಾಸಿಕ ಕಾಲದವರೆಗೆ ಕಾಲಾನುಕ್ರಮವನ್ನು ಗುರುತಿಸಬಹುದಾದ, ಕದಡಿದ ಸ್ಥಿತಿಯಲ್ಲಿರುವ ಮೂರು ವಸತಿ ದಿಬ್ಬಗಳು ಪತ್ತೆಯಾಗಿವೆ.

ಈ ಹಿಂದೆ ರಾಜಾರಾಮ ಹೆಗಡೆ ಅವರು ಈ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಐತಿಹಾಸಿಕ ಕಾಲಕ್ಕೆ ಸೇರಿದ ಮಡಕೆ ಚೂರುಗಳನ್ನು ಪತ್ತೆಹಚ್ಚಿರುವುದು ವರದಿಯಾಗಿದೆ. ಅವುಗಳನ್ನು ಕುವೆಂಪು ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗದ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ.

ಇತ್ತೀಚೆಗೆ ಈ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಸಾಂಸ್ಕೃತಿಕ ಅನುಕ್ರಮವನ್ನು ಗುರುತಿಸಲು ಸಾಧ್ಯವಾಗುವಂತಹ ಸ್ತರಗಳನ್ನು ಹೊಂದಿರುವ ವಸತಿ ದಿಬ್ಬಗಳು ಪತ್ತೆಯಾಗಿವೆ. ಈ ವಸತಿ ದಿಬ್ಬದ ಕೆಳಸ್ತರವು ನವಶಿಲಾಯುಗಕ್ಕೆ ಸೇರಿದೆ. ಅದರ ಮೇಲ್ಭಾಗದಲ್ಲಿ ಬೃಹತ್ ಶಿಲಾಯುಗ ಹಾಗೂ ಐತಿಹಾಸಿಕ ಕಾಲಕ್ಕೆ ಸೇರಿದ ಮಡಕೆ ಚೂರುಗಳ ಸ್ತರಗಳು ಗೋಚರಿಸುತ್ತವೆ. ಸ್ತರಗಳ ಮಧ್ಯೆ ಅಲ್ಲಲ್ಲಿ ಬೂದಿಯ ಅಂಶವೂ ಕಂಡುಬರುತ್ತದೆ.

ಕೆಳಸ್ತರದಲ್ಲಿ ಕೆಂಪು ಮತ್ತು ತಿಳಿಕೆಂಪು ಬಣ್ಣದ ಮಡಕೆ ಚೂರುಗಳು ಕಂಡುಬರುತ್ತವೆ. ಮೂರನೇ ಸ್ತರದಲ್ಲಿ ಐತಿಹಾಸಿಕ ಕಾಲಘಟ್ಟಕ್ಕೆ ಸೇರಿದ ದಪ್ಪ ಹೊದಿಕೆಯುಳ್ಳ ಮಡಕೆ ಚೂರುಗಳು ಹಾಗೂ

ಮಧ್ಯಯುಗಕ್ಕೆ ಸೇರಿದ ಕಪ್ಪು ವರ್ಣದ ಮಡಕೆ ಚೂರುಗಳು ದೊರೆತಿವೆ. ಈ ಹಿಂದೆ ರಾಜಾರಾಮ ಹೆಗಡೆ ಅವರು ಸಂಗ್ರಹಿಸಿದ ಐತಿಹಾಸಿಕ ಕಾಲಘಟ್ಟಕ್ಕೆ ಸೇರಿದ ದಪ್ಪ ಹೊದಿಕೆಯುಳ್ಳ ಕೆಂಪು ವರ್ಣದ ಭಗ್ನಗೊಂಡ ಸುಟ್ಟಮಣ್ಣಿನ ವಸ್ತುಗಳು ತುಂಗಭದ್ರಾ ನದಿಯ ಮೇಲ್ತರದಲ್ಲಿ ದೊರೆತಿರುವುದಾಗಿ ವರದಿಯಾಗಿದೆ.

**ದೊಡೇರಿ**

ಮಡಕೆಚೀಲೂರಿನಿಂದ ಶಿವಮೊಗ್ಗ ರಸ್ತೆಯಲ್ಲಿ ಸುಮಾರು ಅರ್ಧ ಕಿ.ಮೀ. ಸಾಗಿದ ನಂತರ ರಸ್ತೆಯ ಬಲಭಾಗಕ್ಕೆ ಸುಮಾರು 3 ಕಿ.ಮೀ. ದೂರದಲ್ಲಿ ದೊಡೇರಿ ಗ್ರಾಮ ಕಂಡುಬರುತ್ತದೆ. ಈ ಗ್ರಾಮದಲ್ಲಿ ನವಶಿಲಾಯುಗ ಸಂಸ್ಕೃತಿಗೆ ಸೇರಿದ ವಸತಿ ದಿಬ್ಬವು ಆಂಜನೇಯ ದೇವಾಲಯದ ಮುಂಭಾಗದಲ್ಲಿ ಕಂಡುಬರುತ್ತದೆ.

ಗ್ರಾಮದ ಸ್ಥಳೀಯ ಐತಿಹ್ಯವನ್ನು ಪರಿಶೀಲಿಸಿದಾಗ, ಪ್ರಾಚೀನ ಕಾಲದಲ್ಲಿ ಮಾನವನು ಈ ಪ್ರದೇಶಕ್ಕೆ ಬಂದು ನೆಲೆಸಿದ್ದನೆಂಬ ನಂಬಿಕೆ ಸ್ಥಳೀಯರಲ್ಲಿ ಕಂಡುಬರುತ್ತದೆ. ಸ್ಥಳೀಯರು ತಿಳಿಸುವ ಪ್ರಕಾರ, ಗ್ರಾಮದಲ್ಲಿ ದೊಡ್ಡದಾದ ಕೆರೆಯಿದ್ದು, ಅದರ ಏರಿಯ ಪಕ್ಕದಲ್ಲಿ ಜನರು ಬಂದು ವಾಸಿಸಿದ್ದರಿಂದ ಈ ಪ್ರದೇಶಕ್ಕೆ 'ದೊಡ್ಡದ ಏರಿ' ಎಂಬ ಹೆಸರು ಬಂದಿತು. ಕಾಲಕ್ರಮೇಣ ಆಡುಭಾಷೆಯ ಬಳಕೆಯಲ್ಲಿ ಅದು 'ದೊಡೇರಿ' ಎಂದು ರೂಪಾಂತರಗೊಂಡಿತು ಎಂಬ ಸ್ಥಳೀಯ ವಿವರಣೆ ಇದೆ.

ಪ್ರಸ್ತುತ ಸಂಶೋಧನೆಯಲ್ಲಿ ಭೂಸ್ವರೂಪಶಾಸ್ತ್ರೀಯ ಅಧ್ಯಯನದ ಆಧಾರದ ಮೇಲೆ ಕೆರೆಯ ಆಸುಪಾಸಿನಲ್ಲಿ ನವಶಿಲಾಯುಗದ ಮಾನವನು ನೆಲೆಸಿದ್ದಿರಬಹುದಾದ ಕುರುಹುಗಳನ್ನು ಗುರುತಿಸಲಾಗಿದೆ. ಗ್ರಾಮದ ಆಂಜನೇಯ ದೇವಾಲಯದ ಮುಂಭಾಗದಲ್ಲಿರುವ ವಸತಿ ದಿಬ್ಬದ ಮೇಲ್ಸ್ತರದಲ್ಲಿ ಕೆಂಪು ವರ್ಣದ ಮಡಕೆ ಚೂರುಗಳು ಪತ್ತೆಯಾಗಿವೆ. ಈ ಪುರಾತತ್ವ ಅವಶೇಷಗಳು ನವಶಿಲಾಯುಗದ ಮಾನವ ಚಟುವಟಿಕೆಗಳಿಗೆ ಸಂಬಂಧಿಸಿದವುಗಳಾಗಿರಬಹುದೆಂದು ಊಹಿಸಬಹುದು.

ಈ ಪ್ರದೇಶದಲ್ಲಿ ನೀರಿನ ಮೂಲದ ಲಭ್ಯತೆ, ಭೂಸ್ವರೂಪ ಹಾಗೂ ಇತರ ನೈಸರ್ಗಿಕ ಸಂಪನ್ಮೂಲಗಳು ಮಾನವ ವಾಸಸ್ಥಾಪನೆಗೆ ಅನುಕೂಲಕರವಾಗಿದ್ದಿರಬಹುದು. ಈ ಕಾರಣದಿಂದ ನವಶಿಲಾಯುಗದ ಮಾನವನು ಈ ಪ್ರದೇಶದಲ್ಲಿ ನೆಲೆಸಿರುವ ಸಾಧ್ಯತೆಯಿದೆ. ನಂತರದ ಕಾಲಘಟ್ಟಗಳಲ್ಲಿ ಈ ಪ್ರದೇಶವು ಕ್ರಮೇಣ ಗ್ರಾಮವಾಗಿ ಅಭಿವೃದ್ಧಿಗೊಂಡು, ಅದರ ಸುತ್ತಮುತ್ತ ಕೆರೆ ನಿರ್ಮಾಣಗೊಂಡಿರಬಹುದೆಂದು ಊಹಿಸಬಹುದು. ಆದಾಗ್ಯೂ, ಈ ಅಭಿಪ್ರಾಯವನ್ನು ದೃಢಪಡಿಸಲು ಹೆಚ್ಚಿನ ಪುರಾತತ್ವ ಉತ್ಖನನ ಹಾಗೂ ವೈಜ್ಞಾನಿಕ ಅಧ್ಯಯನದ ಅಗತ್ಯವಿದೆ.

**ಹೊನ್ನಾಳಿ ಪ್ರದೇಶದ ಬೃಹತ್ ಶಿಲಾಯುಗದ ನೆಲೆಗಳು**

ಹೊನ್ನಾಳಿ ತಾಲ್ಲೂಕಿನಲ್ಲಿ ಕುಳ್ಳಹಳ್ಳಿ, ಚಿಕ್ಕಗೋಣಿಗೆರೆ, ಹಳ್ಳಿಳ್ಳಿ, ಚೆನ್ನಮುಂಬಾಪುರ, ಚೀಲೂರು, ಬಸವನಪುರ ಹಾಗೂ ಸೋಮನಮಲ್ಲಾಪುರ ಗ್ರಾಮಗಳಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ಪುರಾತತ್ವ ನೆಲೆಗಳು ಪತ್ತೆಯಾಗಿವೆ. ಈ ನೆಲೆಗಳಲ್ಲಿ ಮುಖ್ಯವಾಗಿ ನಿಲುವುಗಲ್ಲುಗಳು, ಸಮಾಧಿ ರಚನೆಗಳು ಹಾಗೂ ಇತರ ಪುರಾತತ್ವ ಅವಶೇಷಗಳು ದೊರೆತಿದ್ದು, ಹೊನ್ನಾಳಿ ಪ್ರದೇಶದಲ್ಲಿ ಬೃಹತ್ ಶಿಲಾಯುಗದ ಸಂಸ್ಕೃತಿಯ

ಅಸ್ತಿತ್ವ ಮತ್ತು ವಿಸ್ತರಣೆಯನ್ನು ತಿಳಿಯಲು ಇವು ಪ್ರಮುಖ ಆಧಾರಗಳಾಗಿವೆ. ಈ ನೆಲೆಗಳ ಕುರಿತು ಕೆಳಗಿನಂತೆ ವಿವರಣೆ ನೀಡಲಾಗಿದೆ.

**ಕುಳ್ಳಹಳ್ಳಿ**

ಹೊನ್ನಾಳಿಯಿಂದ ಶಿಕಾರಿಪುರಕ್ಕೆ ಹೋಗುವ ಮಾರ್ಗದಲ್ಲಿ ಸೊರಟೂರಿನಿಂದ ಸುಮಾರು 14 ಕಿ.ಮೀ. ದೂರದಲ್ಲಿ ಕುಳ್ಳಹಳ್ಳಿ ಗ್ರಾಮವು ಕಂಡುಬರುತ್ತದೆ. ಈ ಗ್ರಾಮವು ಬೆಳಗುತ್ತಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಸೇರಿದೆ. ಕುಳ್ಳಹಳ್ಳಿ ಕೆರೆಯ ಹಿಂಭಾಗದಿಂದ ಸುಮಾರು ಅರ್ಧ ಕಿ.ಮೀ. ಸಾಗಿದರೆ ಹಾಲೇಶಪ್ಪನವರ ಹೊಲವು ಕಂಡುಬರುತ್ತದೆ. ಈ ಹೊಲದಲ್ಲಿ ಬೃಹತ್ ಶಿಲಾಯುಗಕ್ಕೆ ಸೇರಿದ ನಿಲುವುಗಲ್ಲು ಸಮಾಧಿಯೊಂದು ಪತ್ತೆಯಾಗಿದೆ.

ಈ ನಿಲುವುಗಲ್ಲು ನೆಲದಲ್ಲಿ ನೇರವಾಗಿ ನಿಂತಿದ್ದು, ಸುಮಾರು 40 ಡಿಗ್ರಿ ಉತ್ತರ ದಿಕ್ಕಿನತ್ತ ವಾಲಿಕೊಂಡಿದೆ. ಇದು ಸುಮಾರು 8 ಅಡಿ ಎತ್ತರ, 3 ಅಡಿ ಅಗಲ ಹಾಗೂ 1.5 ಅಡಿ ದಪ್ಪವನ್ನು ಹೊಂದಿದೆ. ಕುಳ್ಳಹಳ್ಳಿ ಪ್ರದೇಶದಲ್ಲಿ ಸೂಕ್ಷ್ಮಶಿಲಾಯುಗದಿಂದ ಆಧುನಿಕ ಕಾಲದವರೆಗಿನ ವಿವಿಧ ಪುರಾತತ್ವ ಅವಶೇಷಗಳು ದೊರೆತಿರುವುದು ಈ ಪ್ರದೇಶದ ದೀರ್ಘಕಾಲೀನ ಮಾನವ ವಾಸ ಮತ್ತು ಸಾಂಸ್ಕೃತಿಕ ನಿರಂತರತೆಯನ್ನು ಸೂಚಿಸುತ್ತದೆ.

**ಚೆನ್ನಮುಂಬಾಪುರ**

ಹೊನ್ನಾಳಿಯಿಂದ ಆಗ್ನೇಯ ದಿಕ್ಕಿಗೆ ಸುಮಾರು 24 ಕಿ.ಮೀ. ದೂರದಲ್ಲಿ ಚೆನ್ನಮುಂಬಾಪುರ ಗ್ರಾಮವಿದೆ. ಈ ಗ್ರಾಮವು ಲಿಂಗಾಪುರಕ್ಕೆ ಹೊಂದಿಕೊಂಡಿದೆ. ಚೆನ್ನಮುಂಬಾಪುರ ಗ್ರಾಮದ ಹಾಳುಬಿದ್ದ ಆಂಜನೇಯ ದೇವಾಲಯದ ಪಕ್ಕದಲ್ಲಿರುವ ರಸ್ತೆಯಲ್ಲಿ ಸುಮಾರು ಅರ್ಧ ಕಿ.ಮೀ. ಸಾಗಿದರೆ, ಎಡಭಾಗದಲ್ಲಿರುವ ಜಮೀನಿನಲ್ಲಿ ನಿಲುವುಗಲ್ಲು ಸಮಾಧಿಯೊಂದು ಕಂಡುಬರುತ್ತದೆ.

ಈ ನಿಲುವುಗಲ್ಲು ಜಮೀನಿನ ಮಧ್ಯಭಾಗದಲ್ಲಿದ್ದು, ನೇರವಾಗಿ ನಿಂತಿದೆ. ಇದು ಭೂಮಿಯ ಮೇಲ್ಮಟ್ಟದಿಂದ ಸುಮಾರು 6 ಅಡಿ ಎತ್ತರ, 1.5 ಅಡಿ ಅಗಲ ಹಾಗೂ 0.5 ಅಡಿ ದಪ್ಪವನ್ನು ಹೊಂದಿದೆ. ನಿಲುವುಗಲ್ಲನ್ನು ಡಾಲರೈಟ್ ಶಿಲೆಯಿಂದ ನಿರ್ಮಿಸಿರುವುದು ಗಮನಾರ್ಹವಾಗಿದೆ. ಇದರ ರಚನೆ ಮತ್ತು ನಿರ್ಮಾಣ ತಂತ್ರವು ಬೃಹತ್ ಶಿಲಾಯುಗದ ಸಮಾಧಿ ಪರಂಪರೆಯೊಂದಿಗೆ ಸಂಬಂಧ ಹೊಂದಿರುವುದನ್ನು ಸೂಚಿಸುತ್ತದೆ.

**ಬಸವನಪುರ**

ಹೊನ್ನಾಳಿಯಿಂದ ಪೂರ್ವಕ್ಕೆ ಸುಮಾರು 12 ಕಿ.ಮೀ. ದೂರದಲ್ಲಿರುವ ಬಸವನಪುರ ಗ್ರಾಮವು ಬೆನಕನಹಳ್ಳಿಯ ಕೈಮರದಿಂದ ಪೂರ್ವಕ್ಕೆ ಸುಮಾರು 3 ಕಿ.ಮೀ. ದೂರದಲ್ಲಿ, ಗುಡ್ಡದ ಅಂಚಿನಲ್ಲಿ ಕಂಡುಬರುತ್ತದೆ. ಈ ಗ್ರಾಮಕ್ಕೆ ಹೋಗುವ ರಸ್ತೆಯ ಬಲಭಾಗದಲ್ಲಿರುವ ಸಣ್ಣತಿಮ್ಮಣ್ಣನವರ ಹೊಲದಲ್ಲಿ ನಿಲುವುಗಲ್ಲಿನ ಮಾದರಿಯ ಶಿಲಾ ಸಮಾಧಿಯೊಂದು ಪತ್ತೆಯಾಗಿದೆ.

ಸ್ಥಳೀಯರು ಇದನ್ನು 'ಭಾಣಂತಿ ಕಲ್ಲು' ಹಾಗೂ 'ಗೋರಿಕಲ್ಲು' ಎಂದು ಕರೆಯುತ್ತಾರೆ. 'ಗೋರಿ' ಎಂಬ ಪದವು ಸಮಾಧಿ ಎಂಬ ಅರ್ಥವನ್ನು ನೀಡುವುದರಿಂದ, ಈ ಶಿಲಾರಚನೆಯು ಸಮಾಧಿ ಪರಂಪರೆಗೆ

ಸಂಬಂಧಿಸಿದ್ದಾಗಿರಬಹುದೆಂದು ಊಹಿಸಬಹುದು. ಇದರ ಆಧಾರದ ಮೇಲೆ ಈ ನೆಲೆಯು ಬೃಹತ್ ಶಿಲಾಯುಗದ ಸಂಸ್ಕೃತಿಗೆ ಸಂಬಂಧಿಸಿರಬಹುದಾಗಿದೆ.

ಈ ನಿಲುವುಗಲ್ಲು ಸುಮಾರು 5 ಅಡಿ ಎತ್ತರ, 3 ಅಡಿ ಅಗಲ ಹಾಗೂ 1 ಅಡಿ ದಪ್ಪವನ್ನು ಹೊಂದಿದೆ. ಹೊನ್ನಾಳಿ ತಾಲ್ಲೂಕಿನಲ್ಲಿ ಬೆಣಚುಕಲ್ಲಿನಿಂದ ನಿರ್ಮಿಸಲಾದ ನಿಲುವುಗಲ್ಲು ಪತ್ತೆಯಾಗಿರುವುದು ಈ ನೆಲೆಯ ಪ್ರಮುಖ ವೈಶಿಷ್ಟ್ಯವಾಗಿದೆ.

**ಸೋಮನಮಲ್ಲಾಪುರ**

ಸೋಮನಮಲ್ಲಾಪುರ ಗ್ರಾಮದಲ್ಲಿ ಒಟ್ಟು ಮೂರು ನಿಲುವುಗಲ್ಲುಗಳು ಕಂಡುಬರುತ್ತವೆ. ಅಧ್ಯಯನದ ಅನುಕೂಲಕ್ಕಾಗಿ ಇವುಗಳಿಗೆ 'ಹೆಚ್.ಎಸ್.ಎಸ್–1' ರಿಂದ 'ಹೆಚ್.ಎಸ್.ಎಸ್–3' ರವರೆಗೆ ಸಂಕೇತಗಳನ್ನು ನೀಡಲಾಗಿದೆ. ಈ ಸಂಕೇತಗಳು ಹೊನ್ನಾಳಿಯ ಸೋಮನಮಲ್ಲಾಪುರದಲ್ಲಿರುವ ಮೆನ್‌ಹಿರ್‌ಗಳನ್ನು ಗುರುತಿಸಲು ಬಳಸಲಾಗಿದೆ. ಒಂದೇ ಪ್ರದೇಶದಲ್ಲಿ ಮೂರು ನಿಲುವುಗಲ್ಲುಗಳು ದೊರೆತಿರುವುದು ಈ ನೆಲೆಯ ಬೃಹತ್ ಶಿಲಾಯುಗದ ಸಮಾಧಿ ಪರಂಪರೆಯ ಮಹತ್ವವನ್ನು ಸೂಚಿಸುತ್ತದೆ.

**ಹಳ್ಳಳ್ಳಿ**

ಹನುಮಸಾಗರ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಸೇರುವ ಹಳ್ಳಳ್ಳಿ ಗ್ರಾಮವು ಹೊನ್ನಾಳಿಯಿಂದ ತಿಮ್ಮಿನಕಟ್ಟೆಗೆ ಹೋಗುವ ಮಾರ್ಗದಲ್ಲಿ ಸುಮಾರು 6 ಕಿ.ಮೀ. ದೂರದಲ್ಲಿದೆ. ಗ್ರಾಮದ ತುಂಗಭದ್ರಾ ನದಿಯ ಎಡ ದಂಡೆಯಲ್ಲಿರುವ ಸರ್ವೇಯರ್ ಬಸವರಾಜಪ್ಪನವರ ಹೊಲದಲ್ಲಿ ಹಾಗೂ ಅದರ ಸುತ್ತಮುತ್ತ ಒಟ್ಟು ನಾಲ್ಕು ನಿಲುವುಗಲ್ಲುಗಳು ಪತ್ತೆಯಾಗಿವೆ.

ತುಂಗಭದ್ರಾ ನದಿಯ ದಡದ ಸಮೀಪದಲ್ಲಿ ನಿಲುವುಗಲ್ಲುಗಳ ಪತ್ತೆಯಾಗಿರುವುದು ಗಮನಾರ್ಹವಾಗಿದ್ದು, ಬೃಹತ್ ಶಿಲಾಯುಗದ ಜನರ ವಾಸಸ್ಥಾನ, ಜಲಮೂಲ ಮತ್ತು ಸಮಾಧಿ ಪರಂಪರೆಯ ನಡುವಿನ ಸಂಬಂಧವನ್ನು ಅಧ್ಯಯನ ಮಾಡಲು ಈ ನೆಲೆ ಮಹತ್ವದ್ದಾಗಿದೆ.

**ಕಲ್ಮನೆ ಸಮಾಧಿ**

ಹೊನ್ನಾಳಿಯಿಂದ ಹಳ್ಳಳ್ಳಿಗೆ ಸಾಗುವ ಮಾರ್ಗದಲ್ಲಿ ಕಲ್ಮನೆ ಸಮಾಧಿಯು ಕಂಡುಬರುತ್ತದೆ. ಹನುಮಸಾಗರದಿಂದ ಸುಮಾರು 1 ಕಿ.ಮೀ. ದೂರ ಸಾಗಿದರೆ ರಸ್ತೆಯ ಎಡಭಾಗದಲ್ಲಿರುವ ಜಮೀನಿನ ಮಧ್ಯಭಾಗದಲ್ಲಿ ಈ ಸಮಾಧಿಯನ್ನು ಕಾಣಬಹುದು. ಇದು ಗ್ರಾಮದ ಪಶ್ಚಿಮ ದಿಕ್ಕಿನಲ್ಲಿದೆ.

ಕಲ್ಮನೆ ಸಮಾಧಿಯು ಪ್ರಸ್ತುತ ಭಾಗಶಃ ನಾಶವಾಗಿರುವ ಸ್ಥಿತಿಯಲ್ಲಿದೆ. ಇದು ನೆಲಮಟ್ಟದಿಂದ ಸುಮಾರು ಎರಡೂವರೆ ಅಡಿ ಎತ್ತರದಲ್ಲಿದ್ದು, ಕಲ್ಲಿನ ಚಪ್ಪಡಿಗಳನ್ನು ಒಂದಕ್ಕೊಂದು ತಾಗಿಕೊಂಡಂತೆ ನಿಲ್ಲಿಸಿ, ಅವುಗಳ ಮೇಲೆ ಮತ್ತೊಂದು ಕಲ್ಲಿನ ಚಪ್ಪಡಿಯ ಹಾಸನ್ನು ಹೊದಿಸಲಾಗಿದೆ. ಸಮಾಧಿಯ ರಚನೆ ನೆಲಕ್ಕೆ ಕುಸಿಯದಂತೆ ನೆಲಮಟ್ಟದಲ್ಲಿ ಸುತ್ತಲೂ ಕಲ್ಲುಗಳನ್ನು ಜೋಡಿಸಲಾಗಿದ್ದು, ಒಟ್ಟಾರೆ ಚೌಕಾಕಾರದ ವಿನ್ಯಾಸವನ್ನು ಹೊಂದಿದೆ.

ಕಲ್ಮನೆ ಸಮಾಧಿಯು ಪೂರ್ವ–ಪಶ್ಚಿಮ ದಿಕ್ಕಿನಲ್ಲಿ ಸುಮಾರು 7 ಅಡಿ ಉದ್ದ ಹಾಗೂ ಉತ್ತರ–ದಕ್ಷಿಣ ದಿಕ್ಕಿನಲ್ಲಿ ಸುಮಾರು 5 ಅಡಿ ಅಗಲವನ್ನು ಹೊಂದಿದೆ. ಸಮಾಧಿಯ ಮಧ್ಯಭಾಗದಲ್ಲಿ ಪ್ರಸ್ತುತ ಗಿಡಗಂಟೆಗಳು ಬೆಳೆದಿರುವುದು ಕಂಡುಬರುತ್ತದೆ. ಇದರ ನಿರ್ಮಾಣ ವಿನ್ಯಾಸ, ಬಳಸಿರುವ ಕಲ್ಲಿನ ಚಪ್ಪಡಿಗಳು ಹಾಗೂ ಸಮಾಧಿಯ ರಚನೆಯನ್ನು ಗಮನಿಸಿದಾಗ, ಇದು ಬೃಹತ್ ಶಿಲಾಯುಗದ ಸಮಾಧಿ ಪರಂಪರೆಗೆ ಸಂಬಂಧಿಸಿರಬಹುದೆಂದು ಪರಿಗಣಿಸಬಹುದು. ಈ ನೆಲೆಯ ಸಮಗ್ರ ಸ್ವರೂಪವನ್ನು ತಿಳಿಯಲು ಹೆಚ್ಚಿನ ಕ್ಷೇತ್ರ ಸಮೀಕ್ಷೆ ಮತ್ತು ಪುರಾತತ್ವ ಅಧ್ಯಯನ ಅಗತ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಚೌಲ್ಡ್ ಗೋರ್ಡಾನ್. (1956). *ಲೈನ್ ಇಂಟ್ರಡಕ್ಷನ್ ಟು ಪ್ರೀ ಹಿಸ್ಟಾರಿಕ್ ಆರ್ಕಿಯಾಲಜಿ.* ಪು.ಸಂ. 1–5
- ಗುಪ್ತಾ, ಸಿ.ಎಸ್. (1982). *ಮೆಗಾಲಿಥಿಕ್ ಕಲ್ಚರ್ಸ್ ಆಫ್ ದಕ್ಷಿಣ ಕೋಸಲ.* ಪು.ಸಂ. 264
- ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಸ್ತುಸಂಗ್ರಹಾಲಯದ ಕೈಪಿಡಿ
- ಕೊಟ್ರೇಶ್ ನಾ. ಉತ್ತಂಗಿ. (2004). *ಹೊನ್ನೆಲೆಗಳು.* ಪು.ಸಂ. 89
- ಪೂಣಚ್ಚ ಕೆ.ಪಿ. (1990). *ಆರ್ಕಿಯಾಲಜಿ ಆಫ್ ಮಲ್ನಾಡ್ ರೀಜನ್.* ಪು.ಸಂ. 155–156.
- ರಾಜಾರಾಮ್ ಹೆಗಡೆ. (2005). *ಭಾರತದಲ್ಲಿ ಪ್ರಾಕ್ತನಶಾಸ್ತ್ರ,* ಪು.ಸಂ.88–97
- ಶಿವತಾರಕ್, ಕೆ.ಬಿ. (2001). *ಕರ್ನಾಟಕದ ಪುರಾತತ್ವ ನೆಲೆಗಳು.* ಪು.ಸಂ. 12